

بِسۡمِ اللّٰهِ الرَّحۡمٰنِ الرَّحِيمِ

# ಜಲ್ಸ ಸಾಲಾನ, ಕೆನಡ – 2016

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಕೆನಡದಲ್ಲಿ ಸಮಾವೇಶಗೊಂಡ ಜಲ್ಸದಲ್ಲಿ 07–10–2016 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಅಲ್ಲಾಹನ ಅನುಗ್ರಹದಿಂದ ಕೆನಡದ ಅಹ್ಮದಿಯಾ ಜಮಾಅತಿನ ಜಲ್ಸ ಸಾಲಾನ ಈ ದಿನ ಪ್ರಾರಂಭವಾಗುತ್ತಿದೆ. ಅಲ್ಲಾಹನ ಅನುಗ್ರಹದಿಂದ ಪ್ರತಿ ವರ್ಷ ಲೋಕದ ವಿವಿಧ ದೇಶಗಳ ಜಮಾಅತ್‌ಗಳು ತಮ್ಮ ದೇಶದ ಜಲ್ಸ ಸಾಲಾನ ಜರಗಿಸುತ್ತಾ ಇವೆ. ಇದು ಏಕೆ? ಇದಕ್ಕೆ ಕಾರಣವೇನೆಂದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅಲ್ಲಾಹನಿಂದ ಅನುಮತಿಯನ್ನು ಪಡೆದು ಇದನ್ನು ಪ್ರಾರಂಭಿಸಿದ್ದರು. ವರ್ಷದಲ್ಲಿ ಮೂರು ದಿನ ಖಾದಿಯಾನಿನಲ್ಲಿ ಅಹ್ಮದಿಯರು ಜಮಾಯಿಸಬೇಕು ಎಂದು ಅವರು ಹೇಳಿದರು. ಹೀಗೆ ಜಮಾಯಿಸುವುದು ಒಂದು ಜಾತ್ರೆಯ ರೂಪದಲ್ಲಾಗಲಿ, ಮನರಂಜನೆಗಾಗಲಿ, ಆಟೋಟಗಳಾಗಲಿ ಅಥವಾ ಲೌಕಿಕ ಉದ್ದೇಶಗಳಿಗಾಗಲಿ ಅಲ್ಲ. ಇದರ ಉದ್ದೇಶ ಧಾರ್ಮಿಕ ಜ್ಞಾನದಲ್ಲಿ ವೃದ್ಧಿಯನ್ನು ಗಳಿಸುವುದು ಮತ್ತು ಧಾರ್ಮಿಕ ಮಾಹಿತಿ ವಿಶಾಲಗೊಳಿಸುವುದಾಗಿದೆ. ನಮ್ಮ ಧಾರ್ಮಿಕ ಸೂಕ್ಷ್ಮಜ್ಞಾನ (ಮಅರಿಫತ್) ವೃದ್ಧಿಗೊಳಿಸುತ್ತಾ ಇರಲಿಕ್ಕಾಗಿದೆ. ಮಅರಿಫತ್ ಎಂದರೇನು? ಯಾವುದಾದರೂ ವಿಷಯದ ಬಗ್ಗೆ ಜ್ಞಾನ ಗಳಿಸುವುದು, ಅದರ ಬಗ್ಗೆ ಗಾಢವಾಗಿ ಮನವರಿಕೆ ಮಾಡುವುದೇ ಮಅರಿಫತ್ ಆಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನಾವು ಯಾವುದರ ಬಗ್ಗೆ ಸೂಕ್ಷ್ಮಜ್ಞಾನ ಗಳಿಸಬೇಕೆಂದು ಬಯಸುತ್ತಿದ್ದರು? ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಬಯಸುತ್ತಿದ್ದುದೇನೆಂದರೆ, ನಾವು ಮುಸ್ಲಿಮರು, ನಾವು **ಲಾಇಲಾಹ ಇಲ್ಲಲ್ಲಾಹ್ ಮುಹಮ್ಮದುರ್ರಸೂಲುಲ್ಲಾಹ್** ಎಂದು ಹೇಳುವವರು ಎಂದು ಮೇಲಿಂದ ಮೇಲೆ ಮಾತ್ರ ಹೇಳುವವರಾಗಬಾರದು. ನಾವು ಇಸ್ಲಾಮ್ ಧರ್ಮವನ್ನು ಅವಲಂಬಿಸಿದ ನಂತರ ಅದರ ಬಗ್ಗೆ ನಮ್ಮ ವಿಶ್ವಾಸವನ್ನು ವರ್ಧಿಸುವವರಾಗಬೇಕು. ನಾವು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅಲ್ಲಾಹನ ಸಂದೇಶವಾಹಕರೆಂದೂ ಖಾತಮುಲ್ ಅಂಬಿಯಾ ಎಂದೂ ನಂಬುವವರಾಗಿರುವಾಗ ನಾವು ಅವರ ಆಜ್ಞೆಗಳನ್ನೂ ಅವರ ನಡೆವಳಿಕೆಗಳನ್ನೂ ಅರಿತುಕೊಳ್ಳಲು ಮತ್ತು ಅವುಗಳನ್ನು ಅನುಷ್ಠಾನಕ್ಕೆ ತರಲು ಪ್ರಯತ್ನಿಸುವವರಾಗಬೇಕು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಜಲ್ಸದ ಉದ್ದೇಶಲಕ್ಷ್ಯ ಆಧ್ಯಾತ್ಮಿಕತೆಯಲ್ಲಿ ಅಭಿವೃದ್ಧಿಯನ್ನು ಗಳಿಸುವುದಾಗಿದೆ ಎಂದು ಸಹ ಹೇಳಿದ್ದಾರೆ. ಸೂಕ್ಷ್ಮಜ್ಞಾನ (ಮಅರಿಫತ್) ಗಳಿಸಿದ ನಂತರ, ಅದನ್ನು ಜ್ಞಾನ ಸಂಪಾದನೆಗೆ ಸೀಮಿತವಾಗಿರಿಸದೆ ಅದನ್ನು ಆಧ್ಯಾತ್ಮಿಕತೆಯ ಮತ್ತು ಅನುಷ್ಠಾನ ಕರ್ಮಗಳ ವೃದ್ಧಿಗೆ ಮಾರ್ಗವನ್ನಾಗಿ ಮಾಡಿಕೊಳ್ಳಬೇಕು. ಆಧ್ಯಾತ್ಮಿಕತೆಯಲ್ಲಿ ಅಭಿವೃದ್ಧಿ ಹೊಂದುವುದಿಲ್ಲವಾದರೆ ಜಲ್ಸದಲ್ಲಿ ಭಾಗವಹಿಸುವುದು ನಿಷ್ಪ್ರಯೋಜಕವಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ವಿವರಿಸಿದ ಜಲ್ಸದ ಇನ್ನೊಂದು ಪ್ರಯೋಜನವೇನೆಂದರೆ ಜಲ್ಸದಲ್ಲಿ ಭಾಗವಹಿಸುವ ಪ್ರತಿಯೊಬ್ಬರೂ ಪರಸ್ಪರ ಪರಿಚಯವನ್ನು ಹೆಚ್ಚಿಸಿಕೊಳ್ಳಬೇಕು. ಈ ಪರಸ್ಪರ ಸಂಬಂಧ ಕೇವಲ ತಾತ್ಕಾಲಿಕವಾಗಿರಬಾರದು. ಅದು ಎಷ್ಟು ಬಲಿಷ್ಠವಾಗಿರಬೇಕೆಂದರೆ ಯಾವುದೇ ವಿಷಯ ಈ ಸಂಬಂಧದಲ್ಲಿ ಬಿರುಕನ್ನು ಉಂಟುಮಾಡಲು ಸಾಧ್ಯವಾಗಬಾರದು ಮತ್ತು ಈ ಸಂಬಂಧವನ್ನು ಮುರಿದು ಹಾಕುವಂತಹದಾಗಬಾರದು. ನಂತರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಸಹ ಹೇಳಿದರು: ತಖ್ವದಲ್ಲಿ ಅಭಿವೃದ್ಧಿ ಗಳಿಸಿರಿ. ಇದು ಜಲ್ಸದ ಉದ್ದೇಶಲಕ್ಷ್ಯಗಳಲ್ಲಿ ಬಹಳ ಪ್ರಮುಖವಾಗಿದೆ. ತಖ್ವವನ್ನು ಹೊಂದದೆ ಒಬ್ಬ ಸತ್ಯವಿಶ್ವಾಸಿ ಯಥಾರ್ಥ ಸತ್ಯವಿಶ್ವಾಸಿಯಾಗಲಾರ. ತಖ್ವ ಎಂದರೆ, ನೀವು ಗಳಿಸಿದ ಜ್ಞಾನ ಮತ್ತು ಆಧ್ಯಾತ್ಮಿಕ ಉನ್ನತ ಮಟ್ಟ, ನೀವು ಅಲ್ಲಾಹನೊಂದಿಗೆ ಮತ್ತು ಅವನ ಸಂದೇಶವಾಹಕರೊಂದಿಗೆ ಸ್ಥಾಪಿಸಿದ ಸಂಬಂಧ, ನೀವು ಪರಸ್ಪರ ಸಂಬಂಧಗಳಲ್ಲಿ ಉಂಟುಮಾಡಿದ ಸೌಂದರ್ಯ ಇವುಗಳಲ್ಲಿ ನೀವು ಸ್ಥಿರತೆಯನ್ನು ಹೊಂದಬೇಕು. ಅವುಗಳನ್ನು ಕ್ರಮಬದ್ಧಗೊಳಿಸಬೇಕು. ಅವುಗಳನ್ನು ನಿಮ್ಮ ಜೀವಿತದ ಭಾಗವನ್ನಾಗಿ ಮಾಡಬೇಕು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಜಲ್ಸವನ್ನು ಜರಗಿಸಲು ನಿರ್ಧಾರ ಕೈಗೊಂಡುದರ ಉದ್ದೇಶಲಕ್ಷ್ಯಗಳು ಮೇಲಿನವುಗಳಾಗಿವೆ. ಅವರು ಹೇಳಿದರು: ಪ್ರತಿವರ್ಷ ಅಹ್ಮದಿಯರು ಈ ಉದ್ದೇಶಗಳಿಗೋಸ್ಕರ ಖಾದಿಯಾನಿಗೆ ಬರಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಸ್ವತಃ ಭಾಗವಹಿಸಿ ಜಮಾಅತ್ ಸದಸ್ಯರಿಗೆ ನೇರವಾಗಿ ಉಪದೇಶಿಸುತ್ತಿದ್ದ ಆ ಜಲ್ಸಗಳು ಎಷ್ಟು ಅನುಗ್ರಹಪೂರ್ಣವಾಗಿದ್ದುವು! ಅವರು ಜಮಾಅತಿನ ಜನರಿಗೆ ತರಬೇತಿ ನೀಡುತ್ತಿದ್ದರು. ಜನರ ಆಧ್ಯಾತ್ಮಿಕ ದಾಹವನ್ನು ನೀಗಿಸುತ್ತಿದ್ದರು.

ಈಗ ಅಹ್ಮದಿಯರು ಬಹುಸಂಖ್ಯೆಯಲ್ಲಿ ಖಾದಿಯಾನಿಗೆ ಜಲ್ಸದಲ್ಲಿ ಭಾಗವಹಿಸಲು ಹೋಗುವುದು ಅಸಾಧ್ಯವಾಗಿದೆ. ಆಯಾಕಾಲದ ಖಲೀಫರು ಇರುವ ಸ್ಥಳದಲ್ಲಿ ನಡೆಯುವ ಜಲ್ಸದಲ್ಲಿ ಸಹ ಬಹಳ ಸಂಖ್ಯೆಯಲ್ಲಿ ಅಹ್ಮದಿಯರು ಭಾಗವಹಿಸುವುದು ಕೂಡ ಸಾಧ್ಯವಾಗಲಾರದು. ಅಹ್ಮದಿಯಾ ಜಮಾಅತ್ ಪ್ರಪಂಚದೆಲ್ಲೆಡೆ ಹರಡುತ್ತಾ ಇದ್ದು ಅಭಿವೃದ್ಧಿಗಳಿಸುತ್ತಾ ಇರುವುದರಿಂದ ಯಾವ ದೇಶಗಳಲ್ಲಿ ಜಮಾಅತ್ ಸ್ಥಾಪಿತವಾಗಿದೆಯೋ ಅಲ್ಲೆಲ್ಲಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕಾಲದಲ್ಲಿ ಜರಗಿಸಲಾದ ಜಲ್ಸದ ರೀತಿಯಲ್ಲಿ ಜಲ್ಸಗಳನ್ನು

ಜರಗಿಸಬೇಕಾಗಿದೆ. ನಮ್ಮ ಸ್ಥಿತಿಗಳಲ್ಲಿ ಬದಲಾವಣೆ ಉಂಟುಮಾಡಲು ಮತ್ತು ತರಬೇತಿಯ ಉದ್ದೇಶದಿಂದ ವರ್ಷದಲ್ಲಿ ಕನಿಷ್ಠ ಒಂದು ಸಾರಿ ನಾವು ಜಮಾಯಿಸಬೇಕು ಎಂಬುದು ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನೀಡಿದ ನಿರ್ದೇಶವಾಗಿದೆ.

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ವಿವರಿಸಿದ ಉದ್ದೇಶಲಕ್ಷ್ಯಗಳನ್ನು ಈಡೇರಿಸಲು ನೀವೆಲ್ಲರೂ ಪ್ರತಿವರ್ಷ ಜಮಾಯಿಸುತ್ತಾ ಇದ್ದೀರಿ. ಈ ವರ್ಷ ನೀವು ವಿಶಿಷ್ಟವಾಗಿ ಇಲ್ಲಿ ಜಮಾಯಿಸಿರುವುದು ಏಕೆಂದರೆ ಈ ದೇಶದಲ್ಲಿ ಜಮಾಅತ್ ಸ್ಥಾಪಿತವಾಗಿ ಐವತ್ತು ವರ್ಷಗಳು ಪೂರ್ಣಗೊಂಡಿವೆ. ಇಲ್ಲಿ ವಾಸಿಸುತ್ತಿರುವ ಅಹ್ಮದಿಯರು ಈ ವರ್ಷಕ್ಕೆ ವಿಶಿಷ್ಟ ಮಹತ್ವ ನೀಡುತ್ತಾ ಇದ್ದಾರೆ. ಆದರೆ ಕೆನಡದಲ್ಲಿ ವಾಸಿಸುವ ಪ್ರತಿಯೊಬ್ಬ ಅಹ್ಮದಿ ನೆನಪಿಡಬೇಕಾದುದೇನೆಂದರೆ, ನಾವು ಅಹ್ಮದಿಯರಾಗಿ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಮಾಡಿದ ಬೈಅತ್ ಪ್ರತಿಜ್ಞೆಯನ್ನು ಈಡೇರಿಸಲು ಪ್ರಯತ್ನಿಸುವಾಗ ಮಾತ್ರವೇ ನಾವು ಈ ವರ್ಷಕ್ಕೆ ವಿಶಿಷ್ಟ ಮಹತ್ವ ನೀಡಿದಂತಾಗುತ್ತದೆ ಎಂದು. ಹೀಗೆ ಮಾಡುವುದಿಲ್ಲವಾದರೆ ಐವತ್ತು ವರ್ಷ ದಾಟಲಿ ಅಥವಾ ಹೆಚ್ಚು ವರ್ಷಗಳು ದಾಟಿಹೋಗಲಿ ಅದರಿಂದ ಯಾವ ವ್ಯತ್ಯಾಸವೂ ಉಂಟಾಗಲಾರದು. ನಾವು ಅಲ್ಲಾಹನಿಗೆ ವಾಸ್ತವಿಕವಾಗಿ ಕೃತಜ್ಞತೆ ಅರ್ಪಿಸುವ ದಾಸರಾಗಿ ಅವನ ಆಜ್ಞೆಗಳನ್ನು ಅನುಷ್ಠಾನಕ್ಕೆ ತರುವವರಾಗಬೇಕು. ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಬೈಅತ್ ಮಾಡುವಾಗ ಮಾಡಿದ ಪ್ರತಿಜ್ಞೆಯನ್ನು ನಾವು ಈಡೇರಿಸುವವರಾಗಬೇಕು. ಆ ಪ್ರತಿಜ್ಞೆಗಳಲ್ಲಿ ಒಂದು ಹೀಗಿದೆ: 'ನಾನು ಪವಿತ್ರ ಖುರ್‌ಆನಿನ ಆಡಳಿತೆಯನ್ನು ಪೂರ್ಣವಾಗಿ ನನ್ನ ಮೇಲೆ ಜಾರಿಗೊಳಿಸುವೆನು' ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಯಾವ ರೀತಿಯಲ್ಲಿ ನಮಗೆ ಮಾರ್ಗದರ್ಶನ ನೀಡಿರುವರೋ ಆ ಮಾರ್ಗದರ್ಶನವನ್ನು ಅನುಸರಿಸುವಾಗ ನಾವು ಧಾರ್ಮಿಕ ಆಜ್ಞೆಗಳನ್ನು ಪಾಲಿಸುವವರಾಗುವೆವು. ಮತ್ತು ಅಲ್ಲಾಹನ ವಚನಗಳ ಬಗ್ಗೆ ಹೆಚ್ಚಿಗೆ ಚಿಂತಿಸಿ ನಾವು ನಮ್ಮ ಬುದ್ಧಿಯನ್ನು ಪ್ರಕಾಶಮಾನವನ್ನಾಗಿ ಮಾಡುವವರಾಗುವೆವು ಹಾಗೂ ನಮ್ಮ ವಿಶ್ವಾಸವನ್ನು ದೃಢ ಗೊಳಿಸುವವರಾಗುವೆವು.

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಸ್ಥಳದಲ್ಲಿ ಹೀಗೆ ಹೇಳಿದರು: ನಾನು ಪದೇ ಪದೇ ಜಮಾಅತಿನೊಂದಿಗೆ ಹೇಳಿದ್ದೇನೆ. ನೀವು ಕೇವಲ ಬೈಅತ್ ಮೇಲೆ ಭರವಸೆ ಹೊಂದಬೇಡಿರಿ. ನೀವು ಅದರ ವಾಸ್ತವಿಕತೆ ತನಕ ತಲಪುವವರೆಗೆ ಮೋಕ್ಷಗಳಿಸಲಾರಿರಿ. ಕೇವಲ ಸಿಪ್ಪೆಯನ್ನು ಅವಲಂಬಿಸುವವನು ತಿರುಳಿನಿಂದ ವಂಚಿತನಾಗುವನು. ಒಬ್ಬ ಶಿಷ್ಯ ಸ್ವತಃ ಕರ್ಮನಿಷ್ಠನಾಗದಿದ್ದರೆ ಅವನ ಗುರುವಿನ ಹಿರಿಮೆ ಅವನಿಗೆ ಯಾವ ಲಾಭವನ್ನೂ ನೀಡಲಾರದು. ವೈದ್ಯರು ನೀಡಿದ ಔಷಧಿ ಚೀಟಿಯನ್ನು ಗೋಡೆಗೂಡಿನಲ್ಲಿರಿಸಿದರೆ ಅದರಿಂದ ರೋಗಿಗೆ ಪ್ರಯೋಜನವೇನೂ ಸಿಗದು. ಏಕೆಂದರೆ ಪ್ರಯೋಜನ ಸಿಗುವುದು ಮದ್ದಿನ ಚೀಟಿಯಲ್ಲಿ ಬರೆದ ಪ್ರಕಾರದ ಮದ್ದು ಉಪಯೋಗಿಸಿದಾಗ ಮಾತ್ರವಾಗಿದೆ. ಕಿಶ್ತಿನೂಹ್ ಗ್ರಂಥವನ್ನು ಪದೇ ಪದೇ ಓದಬೇಕು. ಮತ್ತು ಅದರಲ್ಲಿ ಬರೆದಿರುವ ಪ್ರಕಾರ ತನ್ನನ್ನು ಪರಿವರ್ತಿಸಬೇಕು.

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ: ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಹೇಳುತ್ತಾನೆ: قَدْ أَفْلَحَ مَنْ زَكَّاهَا **ಖದ್ ಅಫ್ಲಹ ಮನ್ ಝುಕ್ಕಾಹಾ.** ತನ್ನ ಆತ್ಮವನ್ನು ಶುದ್ಧೀಕರಿಸಿ ತಖ್ವಾವನ್ನು ಅವಲಂಬಿಸುವವನು ಜಯಶಾಲಿಯಾದನು.

ಸಾವಿರಾರು ಕಳ್ಳರು, ವ್ಯಭಿಚಾರಿಗಳು, ಕುಡುಕರು, ದುಷ್ಕೃತ್ಯ ಮಾಡುವವರು ತಾವು ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಉಮ್ಮತ್ (ಸಮುದಾಯಕ್ಕೆ ಸೇರಿದವರು) ಎಂದು ವಾದಿಸುತ್ತಾರೆ. ಆದರೆ ವಾಸ್ತವಿಕವಾಗಿ ಅವರು ಹಾಗೆ ಇದ್ದಾರೆಯೇ, ಖಂಡಿತವಾಗಿಯೂ ಇಲ್ಲ. ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಉಪದೇಶಗಳನ್ನು ಪೂರ್ಣವಾಗಿ ಅನುಷ್ಠಾನಕ್ಕೆ ತರುವವನೇ ಉಮ್ಮತೀ (ಅವರ ಸಮುದಾಯಕ್ಕೆ ಸೇರಿದವನು) ಆಗಿರುವನು.

ಒಂದು ಸಂದರ್ಭದಲ್ಲಿ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಬೈಅತ್ ಮಟ್ಟದ ಬಗ್ಗೆ ಇನ್ನಷ್ಟು ಹೆಚ್ಚಿಗೆ ವಿವರಿಸುತ್ತಾ ಹೇಳಿದರು: ನಾನು ಬೈಅತ್ ಮಾಡಿರುವೆನು, ನಾನು ವಿಶ್ವಾಸಿಯಾಗಿದ್ದೇನೆ ಎಂದು ವಾದಿಸುವವನು ತನ್ನನ್ನು ಪರಿಶೋಧಿಸಿ ನೋಡಬೇಕು. ನಾನು ಸಿಪ್ಪೆಯಾಗಿದ್ದೇನೋ ಅಥವಾ ತಿರುಳು ಆಗಿದ್ದೇನೋ ಎಂದು ಪರಿಶೋಧಿಸಬೇಕು. ನೆನಪಿಡಿರಿ, ಸತ್ಯವಾದ ವಿಷಯವೇನೆಂದರೆ ಅಲ್ಲಾಹನ ಸನ್ನಿಧಿಯಲ್ಲಿ ತಿರುಳಿಗೆ ಹೊರತು ಸಿಪ್ಪೆಗೆ ಯಾವ ಬೆಲೆಯೂ ಇಲ್ಲ. ಚೆನ್ನಾಗಿ ನೆನಪಿಡಿರಿ. ಮೃತ್ಯು ಯಾವಾಗ ಬರುವುದೆಂದು ತಿಳಿಯದು. ಆದರೆ ಮರಣ ಬರಲಿದೆ ಎನ್ನುವುದು ನಿಶ್ಚಯವಾಗಿದೆ. ಆದುದರಿಂದ ಕೇವಲ ವಾದಕ್ಕೆ ನಿಮ್ಮನ್ನು ಸೀಮಿತಗೊಳಿಸಬೇಡಿರಿ ಮತ್ತು ಅದರಲ್ಲಿ ಮಾತ್ರ ಸಂತೋಷಪಡಬೇಡಿರಿ. ಮನುಷ್ಯನು ತನ್ನ ಮೇಲೆ ಅನೇಕ ಮೃತ್ಯುಗಳನ್ನು ಬರಿಸುವ ತನಕ ಮತ್ತು ಅನೇಕ ಬದಲಾವಣೆಗಳ ಮೂಲಕ ಮತ್ತು ಕ್ರಾಂತಿಗಳ ಮೂಲಕ ದಾಟಿ ಹೊರಗೆ ಬರುವ ತನಕ ಮನುಷ್ಯನು ಮಾನವೀಯತೆಯ ಮೂಲ ಉದ್ದೇಶವನ್ನು ಗಳಿಸಲಾರ. ಈ ಮೃತ್ಯುಗಳೆಂದರೇನು? ಅವು ಧಾರ್ಮಿಕ ಕಾರ್ಯಗಳಿಗೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡುವುದೇ ಆಗಿದೆ.

ನೀವು ಲೋಕದ ಈಗಿನ ಸ್ಥಿತಿಯನ್ನು ನೋಡಿರಿ. ನಮ್ಮ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಕೃತ್ಯಗಳ ಮೂಲಕ ತೋರಿಸಿಕೊಟ್ಟಿರುವುದು ತನ್ನ ಮೃತ್ಯು, ತನ್ನ ಜೀವಿತ ಎಲ್ಲವೂ ಅಲ್ಲಾಹನಿಗೋಸ್ಕರವಾಗಿದೆ ಎಂದು. ಆದುದರಿಂದ ನೀವು ವಾಸ್ತವಿಕವಾದುದನ್ನು ಅಪೇಕ್ಷಿಸಿರಿ. ಕೇವಲ ಹೆಸರುಗಳಿಂದ ತೃಪ್ತರಾಗಬೇಡಿರಿ. ವೈಭವಶಾಲಿ ಪ್ರವಾದಿ ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅನುಯಾಯಿ ಎಂದು ಹೇಳಿಕೊಂಡು ಓರ್ವ ಮನುಷ್ಯ ಅವಿಶ್ವಾಸಿಗಳ ಹಾಗೆ ಜೀವಿಸುತ್ತಿರುವುದು ಎಷ್ಟು ನಾಚಿಕೆಗೇಡಿನ ಕೆಲಸವಾಗಿದೆ. ನೀವು ನಿಮ್ಮ ಜೀವಿತದಲ್ಲಿ ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ

ಮಾದರಿಯನ್ನು ಅಳವಡಿಸಿರಿ ಮತ್ತು ಅದೇ ಸ್ಥಿತಿಯನ್ನು ನಿಮ್ಮಲ್ಲಿ ಸ್ಥಿರವಾಗಿರಿಸಿರಿ.

ಒಮ್ಮೆ ಕೆಲವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬಳಿಗೆ ಬಂದು ಬೈಅತ್ ಮಾಡಿದಾಗ ಅವರಿಗೆ ಉಪದೇಶಿಸುತ್ತಾ ಈ ರೀತಿ ಹೇಳಿದರು: ಬೈಅತ್ ಮಾಡಿದ ನಂತರ ಈ ಜಮಾಅತ್ ಸತ್ಯವಾಗಿದೆ, ಹೀಗೆ ನಂಬುವುದರಿಂದ ಅನುಗ್ರಹ ಲಭಿಸುವುದು ಎಂದು ಮಾತ್ರ ತಿಳಿದುಕೊಂಡರೆ ಸಾಕಾಗಲಾರದು. ನೀವು ಸಾತ್ವಿಕರೂ ದೇವ ಭಯವುಳ್ಳವರೂ ಆಗಬೇಕು. ನೀವು ಪ್ರಾರ್ಥನೆ ಮಾಡುತ್ತಾ ಇರಬೇಕು. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಸತ್ಯವಿಶ್ವಾಸದೊಂದಿಗೆ ಸತ್ಕರ್ಮ ಮಾಡುವುದನ್ನು ಸಹ ಸೇರಿಸಿ ಹೇಳಿದ್ದಾನೆ. **ಅಮಲೆ ಸಾಲಿಹ್** (ಸತ್ಕರ್ಮ) ಎಂದರೆ ಅದರಲ್ಲಿ ಒಂದಿಷ್ಟು ಭ್ರಷ್ಟತೆ ಇರಬಾರದು. ದೌರ್ಜನ್ಯ, ತೋರಿಕೆ, ದುರಹಂಕಾರ, ಅನ್ಯರ ಹಕ್ಕುಗಳನ್ನು ಕಿತ್ತುಕೊಳ್ಳುವ ಯೋಚನೆ ಇವುಗಳು ಇರಲೇಬಾರದು. ಸತ್ಕರ್ಮಗಳ ಮೂಲಕ ಮನುಷ್ಯನು ಪರಲೋಕದಲ್ಲಿ ರಕ್ಷಿಸಲ್ಪಡುವ ರೀತಿಯಲ್ಲಿಯೇ ಇಹಲೋಕದಲ್ಲಿಯೂ ರಕ್ಷಿಸಲ್ಪಡುತ್ತಾನೆ. ಒಂದು ಮನೆಯಲ್ಲಿರುವ ಒಬ್ಬನಾದರೂ ಸತ್ಕರ್ಮ ಮಾಡುವವನಾಗಿದ್ದರೆ ಆ ಮನೆಯಲ್ಲಿರುವ ಎಲ್ಲರೂ ರಕ್ಷಿಸಲ್ಪಡುತ್ತಾರೆ. ಕೆಲವು ಜನರು ಹೇಗಿದ್ದಾರೆಂದರೆ ಅವರಿಗೆ ಪಾಪಕೃತ್ಯಗಳು ಯಾವುವು ಎಂದು ತಿಳಿದಿರುತ್ತವೆ. ಆದರೆ ಕೆಲವು ಜನರಿಗೆ ಪಾಪ ಕೃತ್ಯಗಳು ಯಾವುವು ಎಂದು ತಿಳಿದಿರುವುದಿಲ್ಲ. ಅವರು ಅದನ್ನು ಮಾಡುವ ಅಭ್ಯಾಸ ಹೊಂದಿರುತ್ತಾರೆ. ಇದೇ ಕಾರಣದಿಂದ ಅಲ್ಲಾಹನು ಯಾವಾಗಲೂ ಇಸ್ತಿಗ್‌ಫಾರ್ ಮಾಡುತ್ತಿರಬೇಕೆಂದು ಹೇಳಿದ್ದಾನೆ. ಆದುದರಿಂದ ಬಹಳ ಹೆಚ್ಚು ಇಸ್ತಿಗ್‌ಫಾರ್ ಪ್ರಾರ್ಥನೆ ಮಾಡಬೇಕಾಗಿದೆ.

ಜಲ್ಸ ನಡೆಯುವ ಈ ದಿನಗಳು ವಿಶೇಷವಾಗಿ ಪ್ರಾರ್ಥನೆಯ ದಿನಗಳಾಗಿವೆ. ದುಆ ಮಾಡುವುದರೊಂದಿಗೆ, ದುರೂದ್ ಹೇಳುವುದರೊಂದಿಗೆ, ಧಾರಾಳವಾಗಿ ಇಸ್ತಿಗ್‌ಫಾರ್ ಸಹ ಮಾಡಿರಿ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಮನುಷ್ಯನು ಪ್ರತಿಯೊಂದು ತಪ್ಪಿಗಾಗಿಯೂ ಕ್ಷಮೆ ಯಾಚಿಸಬೇಕಾಗಿದೆ. ಪ್ರತ್ಯಕ್ಷವಾದ ಪಾಪಗಳಾಗಿರಲಿ, ಗುಪ್ತವಾದವುಗಳಾಗಿರಲಿ, ಸ್ವತಃ ತಿಳಿದು ಮಾಡಿದ ತಪ್ಪಿಗಾಗಿಯೂ ತಿಳಿಯದೆ ಮಾಡಿದ ತಪ್ಪಿಗಾಗಿಯೂ ಕೈ, ಕಾಲು, ನಾಲಗೆ, ಮೂಗು, ಕಣ್ಣು ಮೊದಲಾದ ಪ್ರತಿಯೊಂದು ಅವಯವಗಳಿಂದ ಸಂಭವಿಸಿರಬಹುದಾದ ಎಲ್ಲ ಪಾಪ ಕೃತ್ಯಗಳಿಗಾಗಿಯೂ ಇಸ್ತಿಗ್‌ಫಾರ್ ಮಾಡುತ್ತಲೇ ಇರಬೇಕಾಗಿದೆ. ಈ ಕಾಲದಲ್ಲಿ ನಾವು ಹಝ್ರತ್ ಆದಂ ಅಲೈಹಿಸ್ಸಲಾಮರ ದುಆ ಮಾಡಬೇಕಾಗಿದೆ. ಅದು ಹೀಗಿದೆ: قَالاَ رَبَّنَا ظَلَمْنَا أَنفُسَنَا وَإِنْ لَمْ تَغْفِرْ لَنَا وَتَرْحَمْنَا لَنَكُونَنَّ مِنْ الْخَاسِرِينَ **ಖಾಲ ರಬ್ಬನಾ ಝಲಂನಾ ಅನ್‌ಫುಸನಾ, ವಇಲ್ಲಂ ತಗ್‌ಫಿರ್‌ಲನಾ ವತರ್‌ಹಂನಾ ಲನಕೂನನ್ನ ಮಿನಲ್ ಖಾಸಿರೀನ್.** ‘ಓ ನಮ್ಮ ಪ್ರಭೂ ನಾವು ನಮ್ಮ ಸ್ವಂತದ ಮೇಲೆಯೇ ದೌರ್ಜನ್ಯವೆಸಗಿದ್ದೇವೆ. ನೀನು ನಮ್ಮ ಪಾಪಗಳನ್ನು ಕ್ಷಮಿಸಿ, ನಮ್ಮ ಮೇಲೆ ದಯೆದೋರದಿದ್ದರೆ ಖಂಡಿತವಾಗಿಯೂ ನಾವು ನಷ್ಟ ಹೊಂದಿದವರಾಗುವೆವು.’ ನನಗೆ ಇಲ್‌ಹಾಂ ಮೂಲಕ ಕಲಿಸಲಾದ ಮತ್ತೊಂದು ದುಆ ಈ ರೀತಿಯಿದೆ: رب كل شيء خادمك رب فاحفظنی وانصرنی وارحمنی **ರಬ್ಬಿ ಕುಲ್ಲು ಶೈಇನ್ ಖಾದಿಮುಕ, ರಬ್ಬಿ ಫಹ್‌ಫಝ್‌ನೀ ವನ್‌ಸುರ್‌ನೀ ವರ್‌ಹಮ್‌ನೀ.** ಈ ದುಆ ಸಹ ಬಹಳ ಹೆಚ್ಚಾಗಿ ಮಾಡಬೇಕಾಗಿದೆ.

ಒಂದು ಸಂದರ್ಭದಲ್ಲಿ ಒಂದು ಸಭೆಯಲ್ಲಿ ಹಝ್ರತ್ ಮೌಲವಿ ಅಬ್ದುಲ್ ಕರೀಮ್ ಸಾಹೇಬರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಹೀಗೆ ನಿವೇದಿಸಿದರು: ಪರಸ್ಪರ ಐಕ್ಯತೆ ಹೊಂದುವ ಬಗ್ಗೆ ಹುಝೂರ್ ಉಪದೇಶ ನೀಡಿರಿ ಎಂದು. ಆಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನೀಡಿದ ಉಪದೇಶದ ಸ್ವಲ್ಪ ಭಾಗ ಈಗ ನಾನು ನಿಮ್ಮ ಮುಂದೆ ಇರಿಸುತ್ತೇನೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ನಾನು ಎರಡು ವಿಷಯಗಳೊಂದಿಗೆ ಮಾತ್ರ ಆಗಮಿಸಿದ್ದೇನೆ. ಒಂದನೆಯದು ಅಲ್ಲಾಹನ ಏಕತ್ವವನ್ನು ಅವಲಂಬಿಸಬೇಕು. ಎರಡನೆಯದು ಪರಸ್ಪರ ಪ್ರೀತಿ ಮತ್ತು ಸಹಾನುಭೂತಿ ಪ್ರಕಟಿಸಬೇಕು. ನೀವು ಎಂತಹ ಮಾದರಿ ತೋರಿಸಬೇಕೆಂದರೆ ಅನ್ಯರು ಆಶ್ಚರ್ಯ ಪಡುವಂತಾಗಬೇಕು. ಸಹಾಬರಲ್ಲಿದ್ದ ಗುಣ ಇದೇ ಆಗಿತ್ತು. ಪವಿತ್ರ ಖುರ್‌ಆನ್ ಹೇಳುತ್ತದೆ: كُنْتُمْ أَعْدَاءً فَأَلَّفَ بَيْنَ قُلُوبِكُمْ **ಕುನ್‌ತುಮ್ ಅಅ್‌ದಾಉನ್ ಫಅಲ್ಲಫ ಬೈನ ಖುಲೂಬಿಕುಮ್.** ನೀವು ಶತ್ರುಗಳಾಗಿದ್ದಿರಿ. ಅಲ್ಲಾಹನು ನಿಮ್ಮ ಹೃದಯಗಳ ಮಧ್ಯೆ ಒಲವು ಸ್ಥಾಪಿಸಿದನು. ನೆನಪಿಡಿರಿ, ಒಲವಿನ ಸ್ಥಾಪನೆ ಒಂದು ಅದ್ಭುತ ಕೃತ್ಯವಾಗಿದೆ. ನೀವು ನೆನಪಿಡಿರಿ, ಯಾರು ತನಗೆ ಇಷ್ಟ ಪಡುವುದನ್ನು ತನ್ನ ಸಹೋದರನಿಗೋಸ್ಕರ ಸಹ ಇಷ್ಟಪಡುವುದಿಲ್ಲವೋ ಅವನು ನನ್ನ ಜಮಾಅತಿಗೆ ಸೇರಿದವನಲ್ಲ. ನೀವು ನೆನಪಿಡಿರಿ, ದ್ವೇಷವು ಬೇರ್ಪಟ್ಟು ಹೋಗುವುದು ಮಹ್‌ದಿಯ ಚಿಹ್ನೆಯಾಗಿದೆ. ಏನು ಆ ಚಿಹ್ನೆ ಈಡೇರದಿರುವುದೇ? ನನ್ನ ಮೂಲಕ ಇನ್‌ಶಾಅಲ್ಲಾಹ್ ಒಂದು ಸಾತ್ವಿಕ ಜಮಾಅತ್ ಸ್ಥಾಪಿಸಲ್ಪಡುವುದು. ಪರಸ್ಪರ ಹಗೆತನದ ಕಾರಣಗಳು ಜಿಪುಣತೆ, ದುರಹಂಕಾರ ಮತ್ತು ತನ್ನಿಷ್ಟ ಪ್ರಕಾರದ ವರ್ತನೆಯಾಗಿವೆ. ತಮ್ಮ ಭಾವೋದ್ವೇಗಗಳ ಮೇಲೆ ಹತೋಟಿ ಸ್ಥಾಪಿಸದವರು, ಪರಸ್ಪರ ಪ್ರೀತಿ ಮತ್ತು ಭ್ರಾತೃ ಭಾವನೆಗಳಿಂದ ಇರಲಾರದವರು ನೆನಪಿಡಲಿ ಅವರು ಈ ಲೋಕದಲ್ಲಿ ಕೆಲವು ದಿನಗಳ ಅತಿಥಿಗಳಾಗಿದ್ದಾರೆ. ಯಾರದಾದರೂ ಕಾರಣದಿಂದ ನಾನು ಆಕ್ಷೇಪಿಸಲ್ಪಡುವುದನ್ನು ಇಷ್ಟಪಡುವುದಿಲ್ಲ. ನನ್ನ ಜಮಾಅತಿಗೆ ಸೇರಿದ ನಂತರ ನನ್ನ ಇಚ್ಛೆ ಪ್ರಕಾರ ವರ್ತಿಸದವನು ಮರದ ಒಣಗಿದ ಕೊಂಬೆಯಾಗಿದ್ದಾನೆ. ಅದನ್ನು ತೋಟಗಾರ ಕಡಿದೆಸೆಯದೆ ಇರುವನೇ? ಒಣಗಿದ ಕೊಂಬೆ ಹಸಿರು ಕೊಂಬೆಗಳ ಜೊತೆ ಸೇರಿ ನೀರನ್ನು ಹೀರುತ್ತದೆ. ಆದರೆ ಆ ನೀರು ಅದನ್ನು ಹಚ್ಚಹಸುರಾಗಿ ಮಾಡಲಾರದು. ಅಂತಹ ಒಣಗಿದ ಕೊಂಬೆ ಬೇರೆ ಕೊಂಬೆಗಳನ್ನೂ ಒಣಗಿಸುತ್ತದೆ. ಆದುದರಿಂದ ನೀವು ಭಯಪಡಿರಿ. ಯಾರು ತನ್ನ ಚಿಕಿತ್ಸೆ ಮಾಡಿಕೊಳ್ಳುವುದಿಲ್ಲವೋ ಅವನು ನನ್ನೊಂದಿಗೆ ಇರಲಾರನು.

ಆದುದರಿಂದ ಪರಸ್ಪರ ವಿದ್ವೇಷವನ್ನು ಪೋಷಿಸುವವರು ಭಯಪಡಬೇಕಾಗಿದೆ. ಈ ಕಾಲದಲ್ಲಿ ನಮ್ಮ

ಸುಧಾರಣೆಗೋಸ್ಕರ ಆಗಮಿಸಿರುವ ಓರ್ವ ಮಹಾತ್ಮರನ್ನು ನಾವು ಸ್ವೀಕರಿಸಿರುವಾಗ, ಅವರ ಉಪದೇಶಗಳನ್ನು ಆಲಿಸಿಕೊಂಡು ಅದರಂತೆ ನಡೆಯಬೇಕಾದುದು ಸಹ ನಮ್ಮ ಬಾಧ್ಯತೆಯಾಗುತ್ತದೆ. ಅವರು ಹೇಳಿದರು: ವಾಸ್ತವದಲ್ಲಿ ಇನ್‌ಸಾನ್ ಎಂಬ ಪದವು ಉನ್‌ಸ್ ಎಂಬುದರಿಂದ ಬಂದಿದೆ. ಅದರಲ್ಲಿ ಎರಡು ಉನ್‌ಸ್‌ಗಳು ಇವೆ. ಒಂದು ಅಲ್ಲಾಹನೊಂದಿಗೆ ಸಂಬಂಧ. ಇನ್ನೊಂದು ಮಾನವ ಕುಲದೊಂದಿಗೆ ಸಹಾನುಭೂತಿ. ಈ ಎರಡು ಉನ್‌ಸ್‌ಗಳು ಯಾರಲ್ಲಿವೆಯೋ ಅವನೇ ಇನ್‌ಸಾನ್ ಎಂದು ಕರೆಯಲ್ಪಡುವನು. ಅಲ್ಲಾಹನು ಲೌಕಿಕ ಕೆಲಸಗಳನ್ನು ಮಾಡಬಾರದೆಂದು ಹೇಳುವುದಿಲ್ಲ. ಉದಾಸೀನತೆಯಿಂದ ಕುಳಿತಿರಬಾರದೆಂದೂ ಕೆಲಸ ಮಾಡಬೇಕೆಂದೂ ಹೇಳುತ್ತಾನೆ. ಆದರೆ ಅದರ ಉದ್ದೇಶ ಲೌಕಿಕ ಲಾಭ ಪಡೆಯುವುದಾಗಿರಬಾರದು. ಯಾವಾಗಲೂ ಅಲ್ಲಾಹನ ಸಂಪ್ರೀತಿ ನಮ್ಮ ಮುಂದೆ ಇರಬೇಕು. ಲೌಕಿಕ ಐಶ್ವರ್ಯಗಳನ್ನು ಗಳಿಸುವ ಪ್ರಯತ್ನದೊಂದಿಗೆ ಪರಲೋಕದ ಪುಣ್ಯಗಳನ್ನು ಗಳಿಸಲು ಸಹ ಧಾರಾಳ ಪ್ರಯತ್ನ ಆವಶ್ಯಕವಾಗಿದೆ. ಈ ವಿಷಯವನ್ನು ವಿಶದೀಕರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಸಂದರ್ಭದಲ್ಲಿ ಹೀಗೆ ಹೇಳಿದರು: ಅಲ್ಲಾಹನು ಈ ಪ್ರಾರ್ಥನೆ ಕಲಿಸಿದ್ದಾನೆ: **رَبَّنَا آتِنَا فِي الدُّنْيَا حَسَنَةً وَفِي الآخِرَةِ حَسَنَةً وَقِنَا عَذَابَ النَّارِ** **ರಬ್ಬನಾ ಆತಿನಾ ಫಿದ್ದುನ್‌ಯಾ ಹಸನತನ್ ವಫಿಲ್ ಆಖಿರತಿ ಹಸನತನ್ ವಖಿನಾ ಅದಾಬನ್ನಾರ್.** ಓ ನಮ್ಮ ಪ್ರಭೂ, ನಮಗೆ ಇಹಲೋಕದಲ್ಲಿ ಒಳಿತನ್ನು ನೀಡು, ಪರಲೋಕದಲ್ಲೂ ಒಳಿತನ್ನು ನೀಡು. ನಮ್ಮನ್ನು ಅಗ್ನಿಯ ಶಿಕ್ಷೆಯಿಂದ ರಕ್ಷಿಸು.

ಈ ಪ್ರಾರ್ಥನೆಯಲ್ಲಿ ಇಹಲೋಕದ ಒಳಿತಿನ ಬಗ್ಗೆ ಆದ್ಯತೆ ನೀಡಲಾಗಿದೆ. ಆದರೆ ಈ ಇಹಲೋಕದ ಒಳಿತು ಪರಲೋಕದಲ್ಲಿ ಸಿಗುವ ಒಳಿತಿಗೆ ಕಾರಣವಾಗಬೇಕು ಎಂದು ಕಲಿಸಲಾಗಿದೆ. ಈ ಪ್ರಾರ್ಥನೆಯಿಂದ ಸ್ಪಷ್ಟವಾಗುವುದೇನೆಂದರೆ, ಸತ್ಯವಿಶ್ವಾಸಿ ಲೌಕಿಕ ಒಳಿತು ಗಳಿಸಲು ಪ್ರಯತ್ನಿಸುವಾಗ ಪರಲೋಕದಲ್ಲಿ ಲಭಿಸಲಿರುವ ಒಳಿತಿನ ಬಗ್ಗೆ ಸಹ ಗಮನಿಸಬೇಕಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನಮ್ಮ ಉಪದೇಶಗಳನ್ನು ತನ್ನ ಜೀವಿತದ ಮಾರ್ಗದರ್ಶಕ ತತ್ವಗಳನ್ನಾಗಿ ಅಂಗೀಕರಿಸುವವನೇ ನಮ್ಮ ಜಮಾಅತಿಗೆ ಸೇರಿದವನಾಗಿದ್ದಾನೆ. ಅವನು ತನ್ನ ಶಕ್ತಿ ಸಾಮರ್ಥ್ಯಗಳಿಗನುಸಾರವಾಗಿ ಅವುಗಳನ್ನು ಅನುಷ್ಠಾನಕ್ಕೆ ತರಲು ಪ್ರಯತ್ನಿಸುತ್ತಾನೆ. ಆದುದರಿಂದ ನಿಮಗೆ ನೀಡಲಾದ ಉಪದೇಶಗಳಿಗನುಸಾರವಾಗಿ ನಿಮ್ಮ ಕೆಲಸಗಳನ್ನು ಮಾಡಲು ನಿಮಗೆ ಸಾಧ್ಯವಿರುವಷ್ಟು ಪ್ರಯತ್ನಿಸಿರಿ. ಕರ್ಮಗಳು ರೆಕ್ಕೆಗಳ ಹಾಗಿವೆ. ಕರ್ಮಗಳನ್ನು ಮಾಡದೆ ಆಧ್ಯಾತ್ಮಿಕ ಪದವಿಗಳ ಉನ್ನತಿಯನ್ನು ಗಳಿಸಲು ಸಾಧ್ಯವಾಗಲಾರದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ: ನಮ್ಮನ್ನು ಯಾವುದಕ್ಕೋಸ್ಕರ ನಿಯೋಜಿಸಲಾಗಿದೆಯೋ ಅದು ಇದಾಗಿದೆ: ತಖ್ವದ ಮೈದಾನ ಬರಿದಾಗಿದೆ. ಆದುದರಿಂದ ತಖ್ವವನ್ನು ಸ್ಥಾಪಿಸಬೇಕಾಗಿದೆ. ಖಡ್ಗ ಎತ್ತಬೇಕಾಗಿಲ್ಲ. ನೀವು ತಖ್ವವನ್ನು ಹೊಂದುವವರಾದರೆ ಲೋಕ ನಿಮ್ಮ ಜೊತೆಗಿರುವುದು. ಆದುದರಿಂದ ನಿಮ್ಮಲ್ಲಿ ತಖ್ವವನ್ನು ಹುಟ್ಟಿಸಿರಿ. ಯಾರು ಮದ್ಯಪಾನ ಮಾಡುತ್ತಾರೋ ಮತ್ತು ಯಾರ ಧಾರ್ಮಿಕ ಚಿಹ್ನೆಗಳಲ್ಲಿ ಮದ್ಯವು ಪ್ರಮುಖ ಭಾಗವಾಗಿದೆಯೋ ಅವರಿಗೆ ತಖ್ವದೊಂದಿಗೆ ಸಂಬಂಧವಿರಲು ಸಾಧ್ಯವಿಲ್ಲ. ಅವರು ಒಳಿತಿನ ವಿರುದ್ಧ ಯುದ್ಧ ಮಾಡುತ್ತಿದ್ದಾರೆ. ಅಲ್ಲಾಹನು ನಮ್ಮ ಜಮಾಅತಿಗೆ ಕೆಡುಕಿನ ವಿರುದ್ಧ ಯುದ್ಧ ಮಾಡುವ ಭಾಗ್ಯವನ್ನು ನೀಡಲಿ. ತಖ್ವ ಮತ್ತು ಪರಿಶುದ್ಧಿಯಲ್ಲಿ ಅಭಿವೃದ್ಧಿ ಹೊಂದುವ ಭಾಗ್ಯವನ್ನು ನೀಡಲಿ. ಇದೇ ಬಹಳ ದೊಡ್ಡ ವಿಜಯವಾಗಿದೆ. ಇದಕ್ಕಿಂತ ಬೇರೆ ಯಾವುದೂ ಪ್ರಭಾವಶಾಲಿಯಾಗಲಾರದು. ಈಗ ಲೋಕದ ವಿವಿಧ ಧರ್ಮಗಳ ಕಡೆಗೆ ನೋಡಿರಿ. ಧರ್ಮದ ಮೂಲ ಉದ್ದೇಶವಾದ ತಖ್ವ ಕಣ್ಮರೆಯಾಗಿದೆ. ಲೋಕದ ವೈಭವಗಳನ್ನು ದೈವವನ್ನಾಗಿ ಮಾಡಲಾಗಿದೆ. ವಾಸ್ತವಿಕ ದೇವನು ಮರೆಯಾಗಿರುವನು. ಸತ್ಯ ದೇವನನ್ನು ಅಪಮಾನಿಸಲಾಗುತ್ತಿದೆ. ಆದರೆ ಈಗ ದೇವನು ಇಚ್ಛಿಸುವುದೇನೆಂದರೆ ಅವನ ಅಸ್ತಿತ್ವವನ್ನು ಲೋಕವು ಅಂಗೀಕರಿಸಬೇಕೆಂದು. ಲೋಕಕ್ಕೆ ಅವನ ಅಸ್ತಿತ್ವದ ಸೂಕ್ಷ್ಮಜ್ಞಾನ ಲಭಿಸಲಿ ಎಂದು. ಲೋಕವನ್ನು ದೇವನೆಂದು ಗಣಿಸುವವರು ದೇವನ ಬಗ್ಗೆ ಭರವಸೆ ಇರುವವರಾಗಲಾರರು. ನೋಡಿರಿ, ಬಹಳ ಕಠಿಣವಾದ ವಿಪತ್ತುಗಳು ಬಂದೆರಗಲಿವೆ. ಅಲ್ಲಾಹನು ಕೊಳಕು ಮತ್ತು ಪರಿಶುದ್ಧಿಯ ಮಧ್ಯೆ ವ್ಯತ್ಯಾಸಮಾಡಿ ತೋರಿಸಲಿರುವನು.

ಲೋಕದ ಇಂದಿನ ಪರಿಸ್ಥಿತಿಯನ್ನು ನೋಡುವಾಗ ಲೋಕದ ಗತಿ ಏನಾಗುವುದೆಂಬ ಚಿಂತೆ ಉಂಟಾಗುತ್ತದೆ. ಕೆಲವು ದಿನಗಳ ಹಿಂದೆ ಒಬ್ಬರು ಹೇಳಿದರು, ಲೋಕವು ಬಹಳ ವೇಗವಾಗಿ ನಾಶದ ಕಡೆಗೆ ಸಾಗುತ್ತಿರುವಾಗ ನಮ್ಮ ಗತಿ ಏನಾಗುವುದು ಎಂದು. ಇದಕ್ಕೆ ಉತ್ತರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಪದ್ಯದಲ್ಲಿ ಹೀಗೆ ಹೇಳಿದ್ದಾರೆ:

**ಆಗ್ ಹೈ ಪರ್ ಆಗ್‌ಸೆ ಓ ಸಬ್ ಬಚಾಯೇ ಜಾಯೇಂಗೆ,**
**ಜೋಕೆ ರಖ್ತೇಹೈಂ ಖುದಾಯೆ ಝುಲ್ ಅಜಾಯಿಬ್‌ಸೆ ಪ್ಯಾರ್.**

(ಅಗ್ನಿ ಇದೆ. ಆದರೆ ಅಗ್ನಿಯಿಂದ ಅವರೆಲ್ಲರೂ ರಕ್ಷಿಸಲ್ಪಡುವರು– ಅದ್ಭುತ ಗುಣಗಳುಳ್ಳ ದೇವನನ್ನು ಪ್ರೀತಿಸುವವರು.)

ಆದುದರಿಂದ ಮುಖ್ಯವಾಗಿ ನಾವು ಅಲ್ಲಾಹನೊಂದಿಗೆ ಸಂಬಂಧವನ್ನು ಬಲಪಡಿಸಬೇಕು. ನಾವು ಅಲ್ಲಾಹನ ಹಕ್ಕುಗಳನ್ನು ಈಡೇರಿಸುವುದರೊಂದಿಗೆ ಅವನ ದಾಸರ ಹಕ್ಕುಗಳನ್ನು ಸಹ ಈಡೇರಿಸಬೇಕು. ಅಲ್ಲಾಹನು ವಿವರಿಸಿದ ತತ್ವಗಳ ಪ್ರಕಾರ ಒಳಿತುಗಳಾಗಿರುದವುಗಳನ್ನು ಗಳಿಸಲು ಪ್ರಯತ್ನಿಸಬೇಕು. ಕೆಡುಕಿನಿಂದ ರಕ್ಷಿಸಿಕೊಳ್ಳಲು ಪ್ರಯತ್ನಿಸಬೇಕು. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಸ್ಪಷ್ಟವಾಗಿ ಕೆಡುಕುಗಳೆಂದು ಹೇಳಿರುವ ಕೆಡುಕುಗಳಿಂದ ನಮ್ಮನ್ನು ರಕ್ಷಿಸಿಕೊಳ್ಳಲು ಪ್ರಯತ್ನಿಸಿರಿ. ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬಿದ ನಂತರ ವಿಶ್ವಾಸಕ್ಕೆ ಸಂಬಂಧಿಸಿಯೂ ಕರ್ಮಗಳಿಗೆ ಸಂಬಂಧಿಸಿಯೂ ಬಲಿಷ್ಠತೆಯಿಂದ ಇನ್ನಷ್ಟು ಬಲಿಷ್ಠತೆಗೆ ತಲಪಲು ಪ್ರಯತ್ನಿಸಬೇಕು. ಇವುಗಳೇ ನಮಗೆ ಮೋಕ್ಷದಾಯಕವಾಗುವುವು. ಇವುಗಳೇ ಅಲ್ಲಾಹನಿಗೆ ಪ್ರಿಯವಾದವುಗಳಾಗಿವೆ. ಅದನ್ನು ಬಿಟ್ಟು ಒಂದು ಜಮಾಅತ್

ಸ್ಥಾಪಿತವಾಗಿ ಐವತ್ತು ವರ್ಷವಾಗಲಿ, ಎಪ್ಪತ್ತೈದು ವರ್ಷವಾಗಲಿ ಅಥವಾ ನೂರು ವರ್ಷಗಳೇ ಆಗಲಿ ದಾಟಿ ಹೋದರೂ ಆಮೂಲಾಗ್ರ ಪರಿವರ್ತನೆಯಾಗದಿದ್ದರೆ ಯಾವುದೇ ಪ್ರಯೋಜನವಾಗದು. ಲೌಕಿಕ ಜನರು ಇಂತಹ ವಿಷಯಗಳಲ್ಲಿ ಸಂತೋಷಪಡುತ್ತಾರೆ. ಆದರೆ ಧಾರ್ಮಿಕ ಜಮಾಅತ್ ಹಾಗೆ ಅಲ್ಲ. ನಾವು ಸಂತೋಷ ಪಡುವುದು, ನಾವು ಅಲ್ಲಾಹನ ಆಜ್ಞೆಗಳನ್ನು ಪಾಲಿಸುವುದರಲ್ಲಿ ಅಭಿವೃದ್ಧಿ ಗಳಿಸಿದ್ದೇವೆ, ನಾವು ಇನ್ನು ಮುಂದೆ ಇನ್ನಷ್ಟು ಹೆಚ್ಚಿಗೆ ಪ್ರಯತ್ನ ಮಾಡುವೆವು ಎಂಬ ನಿರ್ಧಾರದೊಂದಿಗೆ ಆಗಿದ್ದರೆ ಅದು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸಿದಂತಾಗುವುದು. ಇದು ಧರ್ಮ ಬದ್ಧವಾಗಿದೆ. ಆದರೆ ನಮ್ಮ ಹೆಜ್ಜೆ ಪ್ರತಿಯೊಂದು ರೀತಿಯ ಒಳಿತನ್ನು ಮಾಡುವುದರಲ್ಲಿ ಮುಂದುವರಿಯದೆ ನಿಂತಲ್ಲೇ ನಿಂತಿದ್ದರೆ, ಅಥವಾ ಹಿಂದೆ ಸಾಗಲು ತೊಡಗಿದ್ದರೆ ಅದು ಚಿಂತಾರ್ಹವಾದ ವಿಷಯವಾಗಿದೆ. ಆದುದರಿಂದ ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಉಪದೇಶಗಳನ್ನು ನಮ್ಮ ಮುಂದೆ ಇರಿಸಿ ಅಲ್ಲಾಹನ ಮತ್ತು ಅವನ ಸಂದೇಶವಾಹಕರ ಆಜ್ಞೆಗಳನ್ನು ಅನುಷ್ಠಾನಕ್ಕೆ ತರುವುದು ಮತ್ತು ನಮ್ಮ ಅನುಷ್ಠಾನಗಳ ಬಗ್ಗೆ ಪರಿಶೋಧನೆ ನಡೆಸುವುದು ಆವಶ್ಯಕವಾಗಿದೆ. ನಾವು ಯಾವಾಗಲೂ ನಮ್ಮ ಕೆಲಸಗಳನ್ನು ಪರಿಶೋಧಿಸುತ್ತಾ ಇರಬೇಕು. ಇಲ್ಲಿನ ಜಮಾಅತ್ ಎಪ್ಪತ್ತೈದು ವರ್ಷಗಳನ್ನು ಪೂರ್ಣಗೊಳಿಸುವಾಗ ಹೀಗೆ ಹೇಳುವಂತಾಗಬೇಕು: ಧರ್ಮ ಕಾರ್ಯಗಳಿಗೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡುವೆವು ಎಂಬ ಪ್ರತಿಜ್ಞೆಯಲ್ಲಿ ನಾವು ಸ್ಥಿರತೆಯಿಂದ ಇದ್ದೇವೆ ಮಾತ್ರವಲ್ಲ ನಾವು ಅದರಲ್ಲಿ ಅಭಿವೃದ್ಧಿ ಪಡೆಯುವವರಾಗಿದ್ದೇವೆ.

ಅಲ್ಲಾಹನು ಎಲ್ಲರಿಗೂ ಈ ಭಾಗ್ಯ ದಯಪಾಲಿಸಲಿ. ಜಲ್ಸದ ಮೂರು ದಿನಗಳಲ್ಲಿ ವಿಶಿಷ್ಟವಾಗಿ ಪ್ರಾರ್ಥನೆ ಮಾಡುತ್ತಾ ಇರಬೇಕು. ಇಲ್ಲಿನ ಜಲ್ಸದ ಕಾರ್ಯಕ್ರಮಗಳನ್ನು ಆಲಿಸುವುದು ಈ ಜಲ್ಸದ ಉದ್ದೇಶಲಕ್ಷ್ಯವಾಗಿದೆ. ಆದುದರಿಂದ ಪೂರ್ಣವಾಗಿ ಹಾಜರಾಗಿ ಕಾರ್ಯಕ್ರಮಗಳನ್ನು ಆಲಿಸಿರಿ. ಅಲ್ಲಾಹನು ಎಲ್ಲರಿಗೂ ಹೀಗೆ ಮಾಡುವ ಭಾಗ್ಯ ನೀಡಲಿ – ಆಮೀನ್.

—————*****—————


***Friday Sermon delivered by Hadrath Khaleefatul Masih Al Khamis*** *(atba)*

*At, Canada, U.S.A on 07-10-2016.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon